ಪ್ರಾಧ್ಯಾಪಕರಾಗಿ ನೇಮಿಸಿದ್ದಕ್ಕೆ ಇರುವ ಕಾರಣವೇನು? ಇದಕ್ಕಾಗಿ ನೀವು ಸಾರ್ವಜನಿಕರಿಗೆ ಉತ್ತರ ಕೊಡಬೇಕಾಗಿ ಬರುತ್ತದೆ... ಹೀಗಿತ್ತು ಪತ್ರ. ಇನ್ನೂ ಹೀನಾಯವಾದ ಕೆಲ ಪದಗಳನ್ನು ಬಳಸಲಾಗಿತ್ತು. ಆಮೇಲೆ ಕಂಬಾರರು 'ಏನ್ ಹೇಳ್ತಿ ಇದಕ್ಕೆ?' ಅಂದ್ರು. 'ನಾನೇನು ಹೇಳ್ಲಿ ಸರ್. ಕರ್ಕೊಂಡು ಬಂದಿರೋರು ನೀವು, ಕೆಲಸ ಕೊಟ್ಟಿರೋರು ನೀವು. ನೀವೇ ಇದಕ್ಕೆ ಉತ್ತರ ಹೇಳ್ಬೇಕು' ಅಂದೆ. 'ಹಾಗಾದ್ರೆ ನೀನು ನಿಜವಾದ ಭಾಷಾಶಾಸ್ತ್ರಜ್ಞ ಅಂತ ಪ್ರೂವ್ ಮಾಡ್ಬೇಕು' ಅಂದ್ರು. 'ಪ್ರೂವ್ ಮಾಡ್ತೀನೊ ಇಲ್ವೊ ಗೊತ್ತಿಲ್ಲ. ಆದ್ರೆ ನನಗೆ ಗೊತ್ತಿರೋ ಕೆಲಸ ಮಾಡ್ತೇನೆ' ಅಂದೆ. ಹೀಗಾಗಿ ಹೆಚ್ಚೆಚ್ಚು ಭಾಷೆಯ ಬಗ್ಗೆ ಬರೀಬೇಕಾಗಿ ಬಂತು. ಅದು ನನ್ನ ಹೊಣೆಗಾರಿಕೆ ಆಗಿತ್ತು. ಇದರಿಂದ ಸಾಹಿತ್ಯ ವಿಮರ್ಶೆ ಹಿಂದೆ ಸರಿದಿರಬಹುದು. ಹೀಗಾಗಿ, ಐ ವಾಜ್ ಥ್ರೋನ್ ಇನ್ ಟು ದ ಪ್ಲೇ. ಕನ್ನಡ ವಿಶ್ವವಿದ್ಯಾಲಯ ನನ್ನ ಬದುಕಿನ ದೊಡ್ಡ ಆಕ್ಸಿಡೆಂಟ್.

**◆ ಹಿಂದೆಯೂ ನೀವು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿನ ತೊಡಕುಗಳ ಬಗ್ಗೆ ಬರೆದಿದ್ರಿ. ಮತ್ತೆ ಈಗ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ನಿಮಗೆ ಕಾಣಿಸ್ತಾ ಇರುವ ತೊಡಕುಗಳು ಯಾವ ಬಗೆಯವು?**

ಒಂದು ತಲೆಮಾರಿಗೆ ಇಂಟ್ರಾಸ್ಪೆಕ್ಷನ್ ಕಡಿಮೆ ಆಗಿಬಿಟ್ರೆ ಅಪಾಯಗಳಾಗಿಬಿಡ್ತವೆ. ಈ ಜನರೇಶನ್‌ನಲ್ಲಿ ಈ ತರಹದ ಒಂದು ಸಮಸ್ಯೆಯನ್ನು ನಾನು ಫೀಲ್ ಮಾಡ್ತಾ ಇದ್ದೀನಿ. ನಿಂತು ನೋಡೋದು, ಒಳಗಡೇನೆ ನೋಡೋದು, ತಿರುಗಿ ನೋಡೋದು, ಸುತ್ತ ನೋಡೋದು ಈ ತರಹ ಕಾಣ್ತಿಲ್ಲ. ಸಾಗ್ತಾ ಇರೋದು, ಸುಮ್ಮನೆ ಸಾಗ್ತಾ ಇದ್ದಾರೆ. ವಿಮರ್ಶಕ ಮಾತಾಡಿದರೆ ಆತ/ಆಕೆ ಓದುಗರಾಗಿ ಮಾತಾಡಬೇಕು. ಓದುಗರ ಪಾಯಿಂಟ್ ಆಫ್ ವೀವ್‌ನಿಂದ ಮಾತಾಡಬೇಕು. ಕ್ರಿಯೇಟರ್‌ನ ಪಾಯಿಂಟ್ ಆಫ್ ವೀವ್‌ನಿಂದ ಅಲ್ಲ. ದಲಿತ ಸಾಹಿತ್ಯವನ್ನು ಆ ಲೇಖಕರ ಹಿನ್ನೆಲೆಯಲ್ಲಿ ಓದಬಹುದು. ಆದರೆ ನಾನು ಇದಕ್ಕೆ ಹೊರತಾದವನು. ನನಗೆ ಲೇಖಕರ ಲೋಕ, ಅದಕ್ಕೆ ಸಿಗುವ ಜಸ್ಟಿಫಿಕೇಶನ್ ಅಷ್ಟು ಮುಖ್ಯ ಅಲ್ಲ. ಇದರಿಂದ ಸಿಂಪಥಿ ಬರಬಹುದು ನಿಮಗೆ. ಆದ್ರೆ ಅದರಾಚೆಗೆ ಕೃತಿ ತುಂಬಾ ದೊಡ್ಡದಾಗಿ ಕಾಣಿಸೋದಿಲ್ಲ. ಕೃತಿ ದೊಡ್ಡದಾಗಬೇಕಾದರೆ ಓದುಗನ ಸಂಪರ್ಕಕ್ಕೂ ಬರಬೇಕು. ಬಹಳ ಹಿಂದೆ ರಾಜೀವ್ ತಾರಾನಾಥರು ಒಂದು ಮಾತು ಹೇಳಿದ್ರು: 'ಒಂದು ಕೃತಿಯನ್ನು ಓದ್ತಾ ಇರಬೇಕಾದರೆ ಅದು ನನ್ನಲ್ಲಿ ಲಜ್ಜೆಯನ್ನು ಉಂಟುಮಾಡುತ್ತ? ನಾನೀಗ ಬದುಕ್ತಾ ಇರೋ ಕ್ರಮದ ಬಗ್ಗೇನೆ ಬಹಳ ದೊಡ್ಡ ಗಿಲ್ಟ್‌ನ್ನು ಉಂಟುಮಾಡುತ್ತ? ಅನ್ನೋದು ಬಹಳ ಮುಖ್ಯವಾದ ಕ್ವೆಸ್ಟ್' ಅಂತ ಹೇಳಿದ್ರು. ಸಿದ್ದಲಿಂಗಯ್ಯನವರ ಪದ್ಯವನ್ನ ಸೆಲೆಬ್ರೇಟರಿಯಾಗಿ ನಾನು ಓದಬಹುದು ಅಥವಾ ಉದ್ವೇಗದ ಮೂಡ್‌ನಲ್ಲಿ ಓದಬಹುದು. ಆದರೆ ಆ ಅನುಭವಲೋಕದ ಹೊರಗಡೆ ಇರುವ ನನಗೆ ಒಂದು ಕ್ಷಣನಾದರೂನು ಲಜ್ಜೆ ಉಂಟಾಗುತ್ತೆ. ಗಿಲ್ಟ್ ಉಂಟು ಮಾಡುತ್ತದು. ಯಾಕಂದ್ರೆ ಆ ಪದ್ಯಕ್ಕೆ ಕಾರಣವಾದ ಲೋಕದ ಭಾಗ ನಾನು. ಅದು ನನ್ನೊಳಗೆ ಹೇಗೆ ಪ್ರವೇಶ ಮಾಡ್ತದೆ ಅನ್ನೋದು ನನಗೆ ಮುಖ್ಯವಾದ ಪ್ರಶ್ನೆ. ಇಲ್ಲದೆ ಇದ್ರೆ ಸಾಹಿತ್ಯ ಕೃತಿ ನಿಮಗೆ ಒಂದು ಅಧ್ಯಯನದ ವಸ್ತು ಆಗ್ತದೆ ಹೊರತು, ನಿಮ್ಮ ವ್ಯಕ್ತಿತ್ವದ ಒಂದು ವಿಸ್ತರಣೆ ಆಗೋದಿಲ್ಲ. ಉಪಕರಣ ಅನ್ನೋದು ನಮ್ಮ ಕೈಯ ವಿಸ್ತರಣೆ ಅಲ್ವೆ. ಒಂದು ಸುತ್ತಿಗೆಯನ್ನು ತೆಗೆದುಕೊಂಡು ನಾನು ಕೆಲಸ ಮಾಡ್ತಿದ್ದೀನಿ ಅಂದ್ರೆ ಅದು ನನ್ನ ಕೈಯ ಭಾಗ. ತಾರಾನಾಥರು ಓದುಗರ ಕಡೆಯಿಂದ ಈ ತರಹದ ಪ್ರಶ್ನೆಯನ್ನ ಎತ್ತಿದ್ರು. ನನಗೂನು ಸಾಹಿತ್ಯ ಕೃತಿ ಈ ಬಗೆಯ ಒಂದು ರಿಲೇಶನ್. ಇಷ್ಟೊಂದು ಡಿವೈಡ್‌ಗಳಿರುವ ಲೋಕದಲ್ಲಿ ಈ ತರಹದ ಕೃತಿಗಳೊಂದಿಗೆ ಎಲ್ಲೋ ಒಂಥರದ ಸಂಬಂಧವನ್ನು ಕಲ್ಪಿಸಿಕೊಳ್ಳದೆ ಹೋದ್ರೆ ಜಸ್ಟಿಫೈ ಹೇಗೆ ಮಾಡೋದು. ಈ ತರಹದ ಪ್ರಶ್ನೆಯನ್ನ ನಾವು ಮೈಮೇಲೆ ಹಾಕಿಕೊಳ್ಳಲೇಬೇಕು.

ಕನ್ನಡ ವಿಮರ್ಶೆಯಲ್ಲಿ ಜ್ಞಾನ ಪ್ರಸ್ಥಾನಗಳು ನೆಲೆಗೊಂಡಿದ್ದು ಕಡಿಮೆ. ಕುವೆಂಪು, ಬೇಂದ್ರೆ, ಪುತಿನ ಇದನ್ನು ಕಟ್ಟಲು ಯತ್ನಿಸಿದಂತೆ ತೋರುತ್ತದೆ. ಆದರೆ ಅವರಿಗೆ ತಕ್ಕ ಅನುಯಾಯಿಗಳು, ತಿಳಿವನ್ನು ಬೆಳೆಸಬಲ್ಲವರು ರೂಪುಗೊಳ್ಳಲಿಲ್ಲ. ಈ ಪ್ರಯತ್ನಗಳಲ್ಲೂ ಕವಿ ಮತ್ತು ಕೃತಿಗಳೇ ಕೇಂದ್ರದಲ್ಲಿದ್ದವು. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಅವರ ಚಿಂತನೆಗಳಿಂದ ವಿಮರ್ಶೆ ಏನು ಪಡೆಯಲು ಸಾಧ್ಯ ಎಂಬುದನ್ನು ನಾವು ಎಂದೂ ಯೋಚಿಸಿದಂತೆ ತೋರುವುದಿಲ್ಲ. ಅಲ್ಲದೆ,